ಆರ್.ಪಿ.ಎ.ಡಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2014
(ಅಡಿಕ ಪುಟ 1 ರಿಂದ 21)

ಕರ್ನಾಟಕ ಸರ್ಕಾರದ ಸಚಿವಾಲಯ,
೬ನೇ ಮಹಡಿ, 1 ನೇ ಹಂತ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22.05.2014.

## ಸುತ್ತೋಲೆ

ವಿಷಯ: 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಕ್ಕಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಸ್ವೀಕರಿಸಲಾಗುವ ಅರ್ಜಿಗಳನ್ನು ನಿರ್ವಹಿಸುವ ಸಂಬಂಧ ಪಾಲಿಸಬೇಕಾದ ಸೂಚನೆಗಳು.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 86 ಪಿಎಫ್‌ಜಿ 2013 ದಿನಾಂಕ:20.08.2013.
2. ಮಹಾಲೇಖಪಾಲರ ಕಛೇರಿಗೆ ಬರೆದ ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2013 ದಿನಾಂಕ:18.02.2014.
3. ಮಹಾಲೇಖಪಾಲರ ಕಛೇರಿಯ ಪತ್ರ ಸಂಖ್ಯೆ: PA/C/2013-14/1139-1140 ದಿನಾಂಕ:07.10.2013.
4. ಮಹಾಲೇಖಪಾಲರ ಕಛೇರಿಯ ಪತ್ರ ಸಂಖ್ಯೆ: PM/G III/C-40-FFWR/ 2014-15/51 ದಿನಾಂಕ:06.05.2014.
5. ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ:16.01.2006 ರಂದು ಮಹಾಲೇಖಪಾಲರಿಗೆ ಬರೆದ ಪತ್ರ ಸಂಖ್ಯೆ:D.No.231/KS/05-FF(WZ)
6. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬರೆದಿರುವ ಪತ್ರ ಸಂಖ್ಯೆ: 124/7273/2012–ಎಫ್‌ಎಫ್ (ಡಬ್ಲ್ಯುಜೆಡ್) ದಿ:19.10.2012.
7. ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಪತ್ರ ಸಂಖ್ಯೆ: 08/03/2011– ಎಫ್‌ಎಫ್ (ಪಿ) ದಿನಾಂಕ:05/03/2014.
8. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಖಜಾನಾಧಿಕಾರಿಗಳಿಗೆ ಕಳುಹಿಸಲಾಗಿರುವ ಸರ್ಕಾರದ ಪತ್ರ ಸಂಖ್ಯೆ; ಸಿಆಸುಇ 37 ಪಿಎಫ್‌ಜಿ 2014 ದಿನಾಂಕ: 28/03/2014

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಕ್ಕಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಯವರ ಮೂಲಕ ಅರ್ಜಿದಾರರಿಂದ ಅಗತ್ಯ ದಾಖಲೆಗಳನ್ನು ಪಡೆದು, ಇಂತಹ ಪ್ರಕರಣಗಳಲ್ಲಿ ಕೇಂದ್ರ ಕುಟುಂಬ

ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಜಿಲ್ಲಾ ಖಜಾನೆಯ ವತಿಯಿಂದ ಮಹಾಲೇಖಪಾಲರ ಕಛೇರಿಗೆ ಕಳುಹಿಸಿ, ಈ ಸಂಬಂಧ ಮಹಾಲೇಖಪಾಲರ ಅನುಮೋದನೆಯನ್ನು ಪಡೆದು, ನಂತರ ಸಂಬಂಧಪಟ್ಟ ಅರ್ಜಿದಾರರಿಗೆ ಕೇಂದ್ರ ಪಿಂಚಣಿಯನ್ನು ಮಂಜೂರು ಮಾಡಲು ಕ್ರಮ ಜರುಗಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಖಜಾನಾಧಿಕಾರಿಯವರಿಗೆ ಉಲ್ಲೇಖ (1)ರಲ್ಲಿ ನಮೂದಿಸಿರುವ ಸುತ್ತೋಲೆಯ ಮೂಲಕ ಸೂಚಿಸಲಾಗಿತ್ತು.

ಆನಂತರ, ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ, ಇಂತಹ ಪ್ರಕರಣಗಳಲ್ಲಿ ಮಹಾಲೇಖಪಾಲರ ಅನುಮೋದನೆ ಅಗತ್ಯವಿದೆಯೇ? ಅಥವಾ ಇಲ್ಲವೇ? ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ಮಹಾಲೇಖಪಾಲರನ್ನು ಕೋರಲಾಗಿತ್ತು.

ಈ ಸಂಬಂಧ ಹಿಂದೆ, ಉಲ್ಲೇಖ (5) ಮತ್ತು (6)ರಲ್ಲಿ ನಮೂದಿಸಿರುವ ದಿನಾಂಕ:16.01.2006 ಹಾಗೂ ದಿನಾಂಕ:19.10.2012ರ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಪತ್ರಗಳಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ, 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣುಮಕ್ಕಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಆಯಾ ಪಿಂಚಣಿ ಬಟವಾಡ ಅಧಿಕಾರಿಗಳ ಮೂಲಕ ಮಂಜೂರು ಮಾಡಬಹುದೆಂದು ಕೇಂದ್ರ ಸರ್ಕಾರವು ಹಿಂದೆ ವಿವರವಾದ ಸೂಚನೆಗಳನ್ನು ನೀಡಿದೆ. ಅದರಂತೆಯೇ, ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಇಂತಹ ಪ್ರಕರಣಗಳ ಸಂಬಂಧ ಮಹಾಲೇಖಪಾಲರ ಅನುಮೋದನೆ ಪಡೆಯುವ ಅವಶ್ಯಕತೆ ಇರುವುದಿಲ್ಲವೆಂದು ಉಲ್ಲೇಖ (3) ಮತ್ತು (4) ರಲ್ಲಿ ನಮೂದಿಸಿರುವ ಪತ್ರಗಳಲ್ಲಿ ಮಹಾಲೇಖಪಾಲರು ಸೂಚಿಸಿದ್ದಾರೆ. ಅದರಂತೆಯೇ, ಉಲ್ಲೇಖ (1), (3), (4), (5), (6), (7) ಮತ್ತು (8) ರಲ್ಲಿ ನಮೂದಿಸಿರುವ ಪತ್ರಗಳ ಪ್ರತಿಯನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ.

ಅಲ್ಲದೆ, ಉಲ್ಲೇಖ (3) ರ ದಿನಾಂಕ: 07/10/2013ರ ಪತ್ರದಲ್ಲಿ ಮಹಾಲೇಖಪಾಲರು ನೀಡಿರುವ ಸೂಚನೆಗಳ ಪ್ರಕಾರ ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ಹೆಣ್ಣುಮಕ್ಕಳ ಪೈಕಿ ಅವರುಗಳ **married/ widowed/ divorced and unemployed daughters** ಇವರುಗಳು ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ, ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆಯಲು ನಿಯಮಾನುಸಾರ ಅರ್ಹರಾಗಿರುವುದಿಲ್ಲವೆಂದು ತಿಳಿಸಲಾಗಿದೆ. ಅದರಂತೆಯೇ, ಈ ಸೂಚನೆಗಳನ್ನು ಗಮನದಲ್ಲಿ ಇಟ್ಟುಕೊಳ್ಳುವಂತೆ ಕೋರಲಾಗಿದೆ

ಮುಂದುವರೆದು, ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರು ಇಬ್ಬರು ಕಾನೂನುಬದ್ಧ ಪತ್ನಿಯರನ್ನು ಹೊಂದಿದ್ದಾಗಿ, ಇಂತಹ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರವು ಉಲ್ಲೇಖ (7) ರಲ್ಲಿನ ದಿನಾಂಕ: 05/03/2014 ರ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನಾಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ. ಇದರ

ಪ್ರತಿಯನ್ನು ಉಲ್ಲೇಖ (8)ರ ಸರ್ಕಾರದ ಪತ್ರದ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಖಜಾನಾಧಿಕಾರಿಗಳಿಗೆ ಕಳುಹಿಸಲಾಗಿದೆ.

ಮುಂದುವರೆದು, ಈ ಸಂಬಂಧ ಉಲ್ಲೇಖ (1) ರಲ್ಲಿ ಹೊರಡಿಸಲಾಗಿರುವ ಸರ್ಕಾರದ ಸುತ್ತೋಲೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಮರುಪರಿಶೀಲಿಸಲಾಗಿದೆ ಅದರಂತೆಯೇ, ಕ್ರಮ ಸಂಖ್ಯೆ (1) ರಲ್ಲಿ ಹೊರಡಿಸಲಾಗಿರುವ ದಿನಾಂಕ: 20/08/2013 ರ ಸರ್ಕಾರದ ಸುತ್ತೋಲೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಮರುಪರಿಶೀಲಿಸಲಾದ ನಂತರ, ಸದರಿ ಸೂಚನೆಗಳನ್ನು ಈ ಮೂಲಕ ಭಾಗಶ: ಮಾರ್ಪಡಿಸುತ್ತಾ, 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸಮ್ಮಾನ್ ಪಿಂಚಣಿ ಯೋಜನೆಯಡಿ, ಕೇಂದ್ರ ಪಿಂಚಣಿಯನ್ನು ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ವಿಧವಾ ಪತ್ನಿಯು ಅಥವಾ ಅವರ ಅವಿವಾಹಿತ, ನಿರುದ್ಯೋಗಿ ಹಾಗೂ ಅವಲಂಬಿತರಾದ ಹೆಣ್ಣು ಮಕ್ಕಳಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನಾಧಿಕಾರಿಗಳು ಇಂತಹ ಪ್ರಕರಣಗಳ ಸಂಬಂಧ ಮಹಾಲೇಖಪಾಲರ ಅನುಮೋದನೆ ಪಡೆಯುವ ಅವಶ್ಯಕತೆ ಇರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಇದಲ್ಲದೆ, ಕ್ರಮ ಸಂಖ್ಯೆ: (1) ರಲ್ಲಿನ ಸರ್ಕಾರದ ಸುತ್ತೋಲೆಯಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ, ಇಂತಹ ಪ್ರಕರಣಗಳಲ್ಲಿ ಅರ್ಜಿದಾರರಿಂದ ನಿಗದಿತ ನಮೂನೆಯ ಅರ್ಜಿ ಹಾಗೂ ಎಲ್ಲಾ ಅಗತ್ಯ ದಾಖಲೆಗಳನ್ನು ಜಿಲ್ಲಾಧಿಕಾರಿಯವರ ಮಟ್ಟದಲ್ಲಿ ಸ್ವೀಕೃತವಾದ ನಂತರ, ಇಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅರ್ಜಿದಾರರು ಕೇಂದ್ರ ಕುಟುಂಬ ಪಿಂಚಣಿಯನ್ನು ಪಡೆಯಲು ಅರ್ಹರಾಗಿದ್ದಲ್ಲಿ, ಈ ಬಗ್ಗೆ ಅರ್ಜಿದಾರರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಯವರು ತಮ್ಮ ಶಿಫಾರಸ್ಸಿನೊಂದಿಗೆ ಸದರಿ ಪ್ರಸ್ತಾವನೆಯನ್ನು ನೇರವಾಗಿ ಆಯಾ ಜಿಲ್ಲಾ ಖಜಾನಾಧಿಕಾರಿಯವರಿಗೆ ಕಳುಹಿಸಿಕೊಡಬೇಕು. ಆನಂತರ, ಇಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಖಜಾನಾಧಿಕಾರಿಯವರು ತಮ್ಮ ಮಟ್ಟದಲ್ಲಿ ಪರಿಶೀಲಿಸಿ, ಅರ್ಜಿದಾರರಿಗೆ ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ನಿಯಮಾನುಸಾರ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸಬೇಕು ಹಾಗೂ ಈ ಬಗ್ಗೆ ಮಾಹಿತಿಯನ್ನು ಮಹಾಲೇಖಪಾಲರು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಕಳುಹಿಸಿಕೊಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

22/05/2014

(ಅಬ್ದುಲ್ ರೆಹಮಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ರಾಜಕೀಯ ವಿಶ್ರಾಂತಿ ವೇತನ-1)
ದೂ:080-22032393

ಗೆ,

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.

22/5/2014

ಮಾಹಿತಿಗಾಗಿ:

ಲೇಖಪಾಲರು, ಕರ್ನಾಟಕ, ಬೆಂಗಳೂರು.